# ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು.

## ಸಿ.ಸಿ.ಸಂಖ್ಯೆಃ 41/25

| | | |
|---|---|---|
| ಸಾಕ್ಷಿದಾರರ ಹೆಸರು | ಪೂಜ | ಸಿ.ಡಬ್ಲ್ಯೂಃ 1 |
| ಗಂಡನ / ತಂದೆ ಹೆಸರು | ಚಂದನ್ | ಪಿ.ಡಬ್ಲ್ಯೂಃ 1 |
| ವಯಸ್ಸು | 23 ವರ್ಷ | |
| ಉದ್ಯೋಗ | ಗೃಹಿಣಿ | |
| ವಾಸಸ್ಥಳ | ಗುಂಡನ ಬೆಳ್ಳೂರು | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 19.06.2026

**ಮುಖ್ಯ ವಿಚಾರಣೆಃ ಸಸಅ ರಿಂದ**

ಚಾಸಾ 2 ನನ್ನ ತಂದೆ, ಚಾಸಾ 3 ನನ್ನ ತಾಯಿ. ಚಾಸಾ 4 ರಿಂದ 7 ರವರು ನಮ್ಮ ಪಕ್ಕದ ಮನೆಯವರು. ನ್ಯಾಯಾಲಯದ ಮುಂದಿರುವ 1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ ನನ್ನ ಅತ್ತೆ, 3ನೇ ಆರೋಪಿ ನನ್ನ ಮಾವ. ದಿ.03.04.2024 ರಂದು 1ನೇ ಆರೋಪಿಯೊಂದಿಗೆ ನನ್ನ ವಿವಾಹವಾಗಿರುತ್ತದೆ. ನಾನು ಮದುವೆಯಾದ ನಂತರ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ನನಗೆ ಕಿರುಕುಳ ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ಚಾಸಾ 1 ಮತ್ತು 2 ರವರಿಗೆ ತಿಳಿಸಿರುತ್ತೇನೆ ಅವರು ಕರೆಸಿ ಬುದ್ಧಿವಾದ ಹೇಳಿರುತ್ತಾರೆ. ಅದರೆ ಪುನಃ ಆರೋಪಿತರು ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾರೆ. ದಿ.21.04.2024 ರಂದು ಬೆ.8.45 ಕ್ಕೆ ತವರು ಮನೆಯಿಂದ ಗಂಡನ ಮನೆಗೆ ಅಧಾರ್ ಕಾರ್ಡ್, ಬಟ್ಟೆ ಒಡವೆ ತರಲು ಹೋದಾಗ 1ನೇ ಆರೋಪಿ ಬಾಗಿಲಿನಲ್ಲೇ ಅಡ್ಡಗಟ್ಟಿ ಇಲ್ಲಿಗೆ ಯಾಕೆ ಬಂದೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಹೊಡೆದು 2ನೇ ಆರೋಪಿ ನನ್ನ ಬಲಗೈಗೆ ಕಚ್ಚಿ ಮುಖಕ್ಕೆ ಪರಚಿರುತ್ತಾರೆ. 3ನೇ ಆರೋಪಿ

ಕೈಯಿಂದ ತಲೆಗೆ ಹೊಡೆದಿರುತ್ತಾರೆ. ನಾನು ಕಿರುಚಿದಾಗ ಚಾಸಾ 2, 3, 4, 5 ರವರು ಬಂದು ಸಮಾಧಾನ ಮಾಡಿ ಆಲೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾನು ದೂರು ದಾಖಲಿಸಿರುತ್ತೇನೆ.

ದೂರಿನಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ದಿ.28.01.2025 ರಂದು ಠಾಣೆಗೆ ಕರೆಸಿ ನಾನು ಹಾಜರುಪಡಿಸಿದ ಲಗ್ನಪತ್ರಿಕೆ, ಭಾವಚಿತ್ರ ಪಡೆದುಕೊಂಡಿರುತ್ತಾರೆ. ಆಗ ಸಮಯ ಸಂಜೆ 5.45 ಆಗಿರುತ್ತದೆ. ನನ್ನೊಂದಿಗೆ ಚಾಸಾ 5 ಮತ್ತು 7 ರವರು ಇದ್ದರು. ಮಹಜರನ್ನು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಸಾಕ್ಷಿ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು. ಲಗ್ನಪತ್ರಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 4 ರಿಂದ 8 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಪಿ 9 ಎಂದು ಗುರುತಿಸಲಾಯಿತು. ಪೊಲೀಸರಿಗೆ ಆರೋಪಿಗಳು ನನಗೆ ಊಟ ಬಟ್ಟೆ ಕೊಡುತ್ತಿರಲಿಲ್ಲ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ಕೊಟ್ಟಿರುತ್ತಾರೆ ಎಂದು ಮರುಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಆಲೂರು.